**ಅ.ದಾ.ಸಂ. 215/2020 ಪಿ.ಡಬ್ಲೂ.2**

**<u>ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿಗಳ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದಃ</u>**

1) ವಾದಿ ಮತ್ತು 1ನೇ ಪ್ರತಿವಾದಿಯ ಪರಿಚಯ ಇದೆ. ಅವರು ನನ್ನ ದಾಯಾದಿಗಳು. ಪುಟ್ಟರಾಜು ( ಪಿಡಬ್ಲ್ಯೂ-2) ರವರು ಸಹಾ ನನ್ನ ದಾಯಾದಿ. ಜಮೀನಿನ ಮಾತುಕತೆ ವಿಚಾರವನ್ನು ನನಗೆ ವಾದಿ ಮತ್ತು 1ನೇ ಪ್ರತಿವಾದಿ ಇಬ್ಬರೂ ತಿಳಿಸಿದ್ದರು. ಇಂದಿಗೂ ಸಹ ದಾವಾ ಸ್ವತ್ತು ಒಟ್ಟಿಗೆ ಇದ್ದು ಅದರಲ್ಲಿ ನಿಖರವಾಗಿ 1ನೇ ಪ್ರತಿವಾದಿಗೆ ಎಷ್ಟು ಭಾಗ ಇದೆ ಎಂದು ನಿರ್ಧಾರ ಆಗಿಲ್ಲ ಎಂದರೆ ಸರಿ. ಮಾತುಕತೆ ಆದ ಕಾಲಕ್ಕೆ ದಾವಾ ಸ್ವತ್ತಿನ ಪೈಕಿ 1 ಗುಂಟೆ ಸ್ವತ್ತಿಗೆ 10 ಸಾವಿರ ಹಣ ನಿಗದಿ ಮಾಡಿದ್ದೆವು. ಆ ರೀತಿ 1 ಗುಂಟೆ ಸ್ವತ್ತಿಗೆ 10 ಸಾವಿರ ಇದೆ ಎಂದು ನಿಪಿ.1 ರಲ್ಲಿ ಬರೆದಿಲ್ಲ ಆದರೆ ಒಟ್ಟು 20 ಗುಂಟೆ ಜಮೀನಿಗೆ ದರವನ್ನು ನಮೂದು ಮಾಡಿರುತ್ತಾರೆ.

2) 1ನೇ ಪ್ರತಿವಾದಿಯ ಮಗಳ ಮದುವೆಗೆ ಹಣದ ಅವಶ್ಯಕತೆ ಇರುವ ಕಾರಣ ವಾದಿಯ ಮೂಲಕ ನಾನು ಮತ್ತು ಪಿಡಬ್ಲ್ಯೂ-1 ಕೂಡಿ 1ನೇ ಪ್ರತಿವಾದಿಗೆ ಹಣವನ್ನು ಕೊಡಿಸಿದ್ದೆವು ಎಂದರೆ ಸರಿ. ಆ ವೇಳೆಗೆ ನಾನು ಮತ್ತು ನನ್ನ ತಂದೆ ಕೂಡಿ 1ನೇ ಪ್ರತಿವಾದಿಯ ಮೂಲಕ ನಿಪಿ.1 ರ ಕರಾರು ಪತ್ರವನ್ನು ವಾದಿಗೆ ಬರೆಸಿಕೊಟ್ಟಿದ್ದೆವು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಈಗ ವಿದ್ಯುತ್‌ಚ್ಛಕ್ತಿ ಲೈನ್ ಹೋಗಿದೆ ಎಂದರೆ ಸರಿ. ಆ ರೀತಿ ವಿದ್ಯುತ್‌ಚ್ಛಕ್ತಿ ಲೈನ್ ಹಾಕಿದ ಸಂಬಂಧ ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿ. ವಾದಿಯು ಅಲ್ಲಿ ವಿದ್ಯುತ್‌ಚ್ಛಕ್ತಿ ಲೈನ್ ಹಾದು ಹೋಗಿರುವ ಸಂಬಂಧ ಪರಿಹಾರವನ್ನು ಪಡೆದಿರುತ್ತಾರೆ. ಆ ರೀತಿ ಬಂದ ಪರಿಹಾರದ 1ಲಕ್ಷ ಹಣವನ್ನು ವಾದಿಗೆ ಪಡೆದುಕೊಳ್ಳುವಂತೆ 1ನೇ ಪ್ರತಿವಾದಿ ಪುಟ್ಟಸ್ವಾಮಿ ರವರು ತಿಳಿಸಿದ್ದರು ಎಂದರೆ ಸರಿ. ತದನಂತರ ಉಳಿದ 50 ಸಾವಿರ ಹಣವನ್ನು ಹಿಂತಿರುಗಿಸುವುದಾಗಿ 1ನೇ ಪ್ರತಿವಾದಿ ತಿಳಿಸಿದ ನಂತರ ಅವರ ನಡುವೆ ಮಾತುಕತೆ ಆಗದೇ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ. ಪ್ರಸ್ತುತ 1ನೇ ಪ್ರತಿವಾದಿಯೇ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷ್ಯ ನುಡಿಯುವಂತೆ ವಾದಿಯೇ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ವಾದಿಗೆ ನಿಪಿ.1 ರ

ಪತ್ರದಲ್ಲಿ ತಿಳಿಸಿರುವ ಹಣದ ಪೈಕಿ 50 ಸಾವಿರ ಹಣವನ್ನು ಮಾತ್ರ ಹಿಂತಿರುಗಿಸಬೇಕಾಗಿದ್ದು ಮತ್ತು ಅವರ ನಡುವೆ ಆದ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ತಿಳಿದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**